**<u>ಮೇಃ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಧೋಳ</u>**

C.C.No.1529/2022
CW13/PW8

| | |
|---|---|
| ಹೆಸರು | ಮಹಾಂತೇಶ ಕೊಳ್ಳಿ |
| ತಂದೆಯ ಹೆಸರು | ಪವಾಡೆಪ್ಪ |
| ವಯಸ್ಸು | 47 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಜಮ್ಮನಕಟ್ಟಿ ಗ್ರಾಮ. |

**ದಿನಾಂಕಃ 18-12-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆಃ ಎ.ಪಿ.ಪಿ ರವರಿಂದ.</u>**

ದಿನಾಂಕ 09.07.2022 ರಂದು ಸಾಯಂಕಾಲ 4-30 ಗಂಟೆ ಸುಮಾರಿಗೆ ನಾನು ಊರಿನಲ್ಲಿದ್ದಾಗ ಚಾಸಾ-1 ರವರ ಮಗ ವೆಂಕಪ್ಪ ಇವನು ಅಪಘಾತದಲ್ಲಿ ತೀರಿಕೊಂಡಿರುತ್ತಾನೆ ಎಂದು ನಮಗೆ ಮಾಹಿತಿ ತಿಳಿಯಿತು. ನಂತರ ನಾನು ಮತ್ತು ಇತರರು ಕೂಡಿಕೊಂಡು ಮುಧೋಳ ಸರ್ಕಾರಿ ಆಸ್ಪತ್ರೆಗೆ ಬಂದು ಸದರಿ ಆಸ್ಪತ್ರೆಯ ಶವಾಗಾರಕ್ಕೆ ಹೋಗಿ ಸದರಿ ವೆಂಕಪ್ಪ ಇವನ ಶವವನ್ನು ನೋಡಿದೇವು. ಅವನ ಮೈಮೇಲೆ ಗಾಯಗಳಾಗಿ ಅವನ ತೊಡೆಯ ಮೇಲೆ ಗಾಲಿ ಹಾಯ್ದಿರುವುದು ಕಂಡುಬಂದಿತು. ನಂತರ ಸದರಿ ಅಪಘಾತದ ಬಗ್ಗೆ ನಾವು ಚಾಸಾ 9 ರವರನ್ನು ಕೇಳಿದಾಗ ಅವರು ನಾವು ಕಬ್ಬಿಣದ ಸಾಮಾನುಗಳನ್ನು ತರಲು ಮುಧೋಳಕ್ಕೆ ಟ್ರಾಕ್ಟರದಲ್ಲಿ ಬಂದಿದ್ದೇವು. ನಂತರ ಕಬ್ಬಿಣದ ಸಾಮಾನುಗಳನ್ನು ಸದರಿ ಟ್ರಾಕ್ಟರಲ್ಲಿ ಲೋಡ ಮಾಡಿಕೊಂಡು ಮರಳಿ ಹಲಗಲಿ ಗ್ರಾಮಕ್ಕೆ ಹೋಗುತ್ತಿರುವಾಗ ಮಂಟೂರು ಕ್ರಾಸ ಹತ್ತಿರ ಟ್ಯಾಕ್ಟರ ಚಾಲಕನಾದ ರಾಹೂಲ ಇವನು ಸದರಿ ಟ್ರಾಕ್ಟರನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಹೋಗಿ ತೀರುವಿನಲ್ಲಿ ಒಮ್ಮೆಲೆ ಕಟ್ ಹೊಡೆದಿದ್ದರಿಂದ ಚಾಲಕನ ಪಕ್ಕದಲ್ಲಿ ಕುಳಿತಿದ್ದ ವೆಂಕಪ್ಪ ಇವನು ಒಮ್ಮೆಲೆ ಕೆಳಗೆ ಬಿದ್ದಿದ್ದರಿಂದ ಅವನ ಮೇಲೆ ಟ್ರಾಕ್ಟರದ ಗಾಲಿಗಳು ಹಾಯ್ದು ಹೋಗಿದ್ದರಿಂದ ಅವನು ಸ್ಥಳದಲ್ಲಿಯೇ ತೀರಿಕೊಂಡನು ನಂತರ ಅವನ ಶವವನ್ನು ನಾವು ಮತ್ತು ಇತರರು ಕೂಡಿಕೊಂಡು ಮುಧೋಳ ಸರ್ಕಾರಿ ದವಾಖಾನೆಗೆ ತಂದಿರುತ್ತೇವೆ ಎಂದು ಹೇಳಿದರು.

**<u>ಪಾಟೀ ಸವಾಲು ಃ- ಆರೋಪಿ ನಂ.1 ಪರ ಶ್ರೀ.ಕೆ.ಎಮ್.ಕೆ ವಕೀಲರಿಂದಃ</u>**

ದಿನಾಂಕ 09.07.2022 ರಂದು ನಾನು ಜಮ್ಮನಕಟ್ಟಿ ಗ್ರಾಮದಲ್ಲಿ ಇದ್ದೆ. ಅಪಘಾತದ ವಿಷಯವನ್ನು ಚಾಸಾ-9 ರವರು ಫೋನ ಮುಖಾಂತರ ಸಾಯಂಕಾಲ 4-30 ರಿಂದ 5-00 ಗಂಟೆಯ ಒಳಗೆ ಚಾಸಾ-14 ರವರಿಗೆ ತಿಳಿಸಿದ್ದರು. ಚಾಸಾ-1 ರವರ ಮನೆ ನಮ್ಮ ಮನೆಯಿಂದ ಸುಮಾರು 100 ಮೀಟರ ಅಂತದರಲ್ಲಿ ಇರುತ್ತದೆ. ಅಪಘಾತದ ವಿಷಯವನ್ನು ಚಾಸಾ-9 ರವರು ಫೋನ ಮಾಡಿ ಚಾಸಾ-14 ರವರಿಗೆ ತಿಳಿಸಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದ ವಿಷಯವನ್ನು ನನ್ನ ಅಣ್ಣ ನನಗೆ ಹೇಳಿದಾಗ ಸಾಯಂಕಾಲ 5-00 ಗಂಟೆ ಆಗಿತ್ತು. ಸದರಿ ಅಪಘಾತದ ವಿಷಯವನ್ನು ನನ್ನ ಅಣ್ಣ ನನಗೆ

ಹೇಳಿದಾಗ ಸಾಯಂಕಾಲ 5-00 ಗಂಟೆ ಆಗಿತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನಾನು ವೈಯಕ್ತಿಕವಾಗಿ ನೋಡಿರುವುದಿಲ್ಲ ಎಂದರೆ ಸರಿ. ಅಪಘಾತದ ವಿಷಯ ಗೊತ್ತಾಗಿ ನಾನು ಮುದೋಳ ಸರ್ಕಾರಿ ಆಸ್ಪತ್ರೆಗೆ ಬಂದು ಮೃತ ವೆಂಕಪ್ಪ ಇವನ ಶವ ನೋಡಿದಾಗ ಅವನ ದೇಹದ ಎಲ್ಲ ಕಡೆ ಗಾಯಗಳಾಗಿ ಅವನ ತೊಡೆಗಳ ಮೇಲೆ ಗಾಲಿ ಹಾಯ್ದಿರುವುದು ಕಂಡುಬಂದಿತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ಅಪಘಾತದ ಬಗ್ಗೆ ನಾವು ಚಾಸಾ-9 ರವರಿಗೆ ವಿಚಾರಿಸಿದಾಗ ಅವರು ಟಾಕ್ಟರದಲ್ಲಿ ಕಬ್ಬಿಣ ಸಾಮಾನುಗಳನ್ನು ಲೋಡ ಮಾಡಿಕೊಂಡು ಮರಳಿ ಹಡಗಲಿ ಗ್ರಾಮಕ್ಕೆ ಬರುತ್ತಿರುವಾಗ ಮಂಟೂರು ಕ್ರಾಸ ಹತ್ತಿರ ಆರೋಪಿತನು ವೇಗವಾಗಿ ಟ್ರಾಕ್ಟರನ್ನು ಚಲಾಯಿಸಿಕೊಂಡು ಹೋಗಿ ತೀರುವಿನಲ್ಲಿ ಒಮ್ಮೆಲೆ ಕಟ್ ಹೊಡೆದಿದ್ದರಿಂದ ಟ್ರಾಕ್ಟರ ಚಾಲಕನ ಬಾಜು ಕುಳಿದ ವೆಂಕಪ್ಪ ಇವನು ಕೆಳಗೆ ಬಿದ್ದಿದ್ದರಿಂದ ಅವನ ಮೇಲೆ ಟ್ರಾಕ್ಟರದ ಗಾಲಿಗಳು ಹಾಯ್ದು ಹೋದವು ಮತ್ತು ಅವನು ಸ್ಥಳದಲ್ಲಿಯೇ ತೀರಿಕೊಂಡನು ಎಂದು ಹೇಳಿದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದ ವಿಷಯವಾಗಿ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹಿತ ವೆಂಕಪ್ಪ ಇವರನು ತೀರಿಕೊಂಡಿದ್ದರಿಂದ ಅವನ ಕುಟುಂಬಕ್ಕೆ ಪರಿಹಾರ ಹಣ ಸಿಗಬೇಕು ಎಂಬ ಉದ್ದೇಶದಿಂದ ಸದರಿ ಅಪಘಾತ ಟ್ರಾಕ್ಟರ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ